ಹಾಕುತ್ತಿದ್ದರೆ ಇನ್ನೊಬ್ಬಳು ಅವುಗಳನ್ನು ಪೀಠೋಪಕರಣಗಳ ಮೇಲೆ ಹಾಸುತ್ತಿದ್ದಳು. ಬಟ್ಲರ್, ಡ್ರಾಯಿಂಗ್ ರೂಮಿನೊಳಗೆ ಸೂಟುಕೇಸುಗಳನ್ನು ತಂದು ಜೋಡಿಸುತ್ತಿದ್ದ. ಆಗಾಗ್ಗೆ ಅಡುಗೆಯವನು ಹೊರಬಂದು ಬಟ್ಲರನೊಂದಿಗೆ ಸಮಾಲೋಚಿಸಿ ಒಳಗೆ ಹೋಗುತ್ತಿದ್ದ. ಮಿಸೆಸ್ ಫೋಸ್ಟರ್ ಈ ರೂಮಿನಿಂದ ಆ ರೂಮಿಗೆ, ಆ ರೂಮಿನಿಂದ ಈ ರೂಮಿಗೆ ಭೇಟಿ ಕೊಡುತ್ತಾ ಎಲ್ಲವೂ ಸುಸೂತ್ರವಾಗಿ ನಡೆಯುತ್ತಿದೆ ಎಂದು ಖಾತರಿಪಡಿಸಿಕೊಳ್ಳುತ್ತಿದ್ದಳು. ಒಂದು ಪುರಾತನ ಚರ್ಮದ ಕೋಟಿನ ಮೇಲೆ ತಲೆಗೆ ಕಪ್ಪು ಹ್ಯಾಟನ್ನು ಧರಿಸಿದ್ದ ಮಿಸೆಸ್ ಫೋಸ್ಟರ್, ಈಗಿಂದೀಗಲೇ ತನ್ನ ಗಂಡ ಹೊರಬರದಿದ್ದರೆ ಪ್ಲೇನ್ ಮಿಸ್ಸಾಗುವುದು ಖಂಡಿತವೆಂದು ಮಾಮೂಲಿಯಾಗಿ ಉದ್ವಿಗ್ನಗೊಂಡಿದ್ದಳು.

'ಗಂಟೆ ಎಷ್ಟಾಯ್ತು ವಾಕರ್?' ಅವಳು ಮತ್ತೊಮ್ಮೆ ಬಟ್ಲರನನ್ನು ಕೇಳಿದಳು.

'ಒಂಬತ್ತು ಗಂಟೆಯಾಗಿ ಹತ್ತು ನಿಮಿಷಗಳಾದವು ಮೇಡಂ.'

'ಕಾರು ಬಂದಿದೆಯಾ?'

'ಹೌದು ಮೇಡಂ. ಲಗೇಜು ತುಂಬಿಸುತ್ತೇನೆ.'

'ಏರ್‌ಪೋರ್ಟ್ ತಲುಪಲು ಕನಿಷ್ಠ ಒಂದು ತಾಸಾದ್ರೂ ಬೇಕು. ನನ್ನ ಪ್ಲೇನ್ ಹನ್ನೊಂದಕ್ಕೆ ಹೊರಡುತ್ತೆ ವಾಕರ್! ಎಲ್ಲಾ ಫಾರ್ಮಾಲಿಟಿಸ್ ಮುಗಿಸಲು ನಾನು ಅರ್ಧ ಗಂಟೆ ಮೊದಲೇ ಅಲ್ಲಿರಬೇಕಂತ ಹೇಳಿದ್ದಾರೆ. ಓ, ಜೀಸಸ್ ಕ್ರೈಸ್ಟ್! ನನ್ನ ಪ್ಲೇನು ಖಂಡಿತಾ ಮಿಸ್ಸಾಗುತ್ತೆ ವಾಕರ್!' ಕೈ ಕೈ ಹೊಸೆಯುತ್ತಾ ಹೇಳಿದಳು ಮಿಸೆಸ್ ಫೋಸ್ಟರ್.

'ನೀವು ಕಿಂಚಿತ್ತೂ ಚಿಂತೆ ಮಾಡಬೇಡಿ ಮೇಡಂ. ಇನ್ನೂ ಟೈಮಿದೆ. ಮಿಸ್ಟರ್ ಫೋಸ್ಟರರಿಗೆ ನಾನು ಈಗಾಗಲೇ ತಿಳಿಸಿದ್ದೇನೆ. ಇಲ್ಲಿಂದ ಒಂಬತ್ತು ಹದಿನೈದಕ್ಕೆ ಹೊರಡುವುದು. ಇನ್ನೂ ಐದು ನಿಮಿಷಗಳಿವೆ.'

'ಓಕೆ, ಓಕೆ... ವಾಕರ್. ಏನಾದ್ರೂ ಆಗಲಿ. ನೀನು ಕಾರಿಗೆ ಲಗೇಜ್ ತುಂಬಿಸಿ ಬಿಡು. ಪ್ಲೀಜ್...'

ಅವಳು ಮತ್ತೊಮ್ಮೆ ಹಾಲಿನಲ್ಲಿ ಗಸ್ತು ಹೊಡೆಯಲಾರಂಭಿಸಿದಳು. ಬಟ್ಲರನು ಕಾಣಲು ಸಿಕ್ಕಿದಾಗ, 'ವಾಕರ್, ಟೈಮೆಷ್ಟಾಯ್ತು?' ಎಂದು ಕೇಳುತ್ತಿದ್ದಳು. 'ಈ ವಿಮಾನವನ್ನು ಯಾವುದೇ ಕಾರಣಕ್ಕೂ ತಪ್ಪಿಸುವಂತಿಲ್ಲ,' ಮಿಸೆಸ್ ಫೋಸ್ಟರ್ ತನ್ನಷ್ಟಕ್ಕೆ ದೃಢವಾಗಿ ಹೇಳುತ್ತಿದ್ದಳು. ತನ್ನ ಈ ಪ್ರಯಾಣಕ್ಕೆ ಗಂಡನನ್ನು ರಾಜಿ ಮಾಡಿಸಲು ಅವಳಿಗೆ ಒಂದು ತಿಂಗಳೇ ಹಿಡಿದಿತ್ತು. ಈಗೇನಾದರೂ ಮಿಸ್ಸಾದರೆ ಎಲ್ಲಾ ವ್ಯರ್ಥ. ಗಂಡ ಪ್ರಯಾಣವನ್ನೇ ರದ್ದು ಮಾಡುತ್ತಾನೆ. ಪ್ರಯಾಣಮಾಡುವುದು ಅವಳೊಬ್ಬಳೇ ಆದರೂ, ಏರ್‌ಪೋರ್ಟಿನವರೆಗೆ ತಾನೂ ಬರುತ್ತೇನೆಂದು ಗಂಡ ಹಟ ಹಿಡಿದಿದ್ದ.

'ದೇವರೇ, ಇವತ್ತು ಖಂಡಿತವಾಗಿಯೂ ನನ್ನ ಪ್ಲೇನ್ ತಪ್ಪಿಹೋಗುತ್ತದೆ! ಇವರು ಯಾವಾಗಾದರೂ ಹೊರಗೆ ಬರುತ್ತಾರಪ್ಪಾ?' ಅವಳು ಚಡಪಡಿಸತೊಡಗಿದಳು.

'ವಾಕರ್, ಟೈಮೆಷ್ಟಾಯ್ತು?'

'ಒಂಬತ್ತು ಹದಿನೆಂಟು ಮೇಡಂ.'

'ಸರಿಯಾಯ್ತು ಬಿಡು. ವಿಮಾನ ತಪ್ಪುವುದು ಗ್ಯಾರಂಟಿ ಎಂದಾಯ್ತು!!' ಅವಳ ಕಣ್ಣುಗಳಿಂದ ಬಳಬಳನೆ ನೀರು ಒಸರಲಾರಂಭಿಸಿತು. ಹಣೆಯ ಮೇಲೆ ಬೆವರಿನ ಹನಿಗಳು ಸಾಲುಗಟ್ಟತೊಡಗಿದವು.